11. Insects Collector
12. Laboratory assistants
13. S.F.W. (Superior Field Workers)
14. Mosquito Collection Instructor (Local Bodies)
15. Sub-Registrars (Local Bodies)
16. Sanitary Overseers (Local Bodies)

Accordingly, the Selection Committee interviewed the eligibls candidates and Selected 394 inservice candidates coming under variouc categories noted above and 131 direct candidates Out of 394 in service candidates Selected, 71 candidates belonging to S C and S T. Out of 131 direct candidates selected 22 candidates belong to S.C. and S.T. and 35 are B.C. candidates.

SRI C. M. ARUMUGAM.—I do not want to go into the merits of the case because it is sub-judice. May I know the reason that warranted the Government to abolish this Committee ?

SRI H. SIDDAVEERAPPA.—I heard a number of complaints. The Committee had not functioned properly.

SRI H. D. DEVEGOWDA —Several departmental committees were constituted during the Governor's rule. There are general compaints regarding these committees. May I know whether the Government is thinking of abolishing all these committees and to constitute separate committees ?

SRI H SIDDAVEERAPPA.—I can speak only regarding department.

SRI C. M, ARUMUGAM —May I take it that this committee was not working within the framework you asked them to work and therefore you abolished it ?

SRI H. SIDDAVEERAPPA.—There were number of complaints, the nature of which I do not wish to go into now. I myself found the work was not satisfactory. Therefore I thought it is not desirable to continue this committee.

## HALF-AN-HOUR DISCUSSION ARISING OUT OF ANSWERS TO QUESTION. No. 185.

*Re:-Reservation in Promotional Vacancies to Scheduled Castes/ Scheduled Tribes.*

MR DEPUTY SPEAKER.—Half-an-hour discussion.

SRI G. PUTTASWAMY (Mudigere).—Now I raise half-an-hour discussion on matters arising out of answers given to Starred Question No. 12 (185) of I List regarding reservation in promotional Vacancies to Scheduled Castes and Scheduled Tribes.

ಮಾನ್ಯ ಅಧ್ಯಕ್ಷರೆ, ನಮ್ಮ ರಾಜ್ಯಾಂಗ ನಿಯಮದ ಪ್ರಕಾರ ಇಂಡಿಯನ್ ಕಾನ್‌ಸ್ಟಿಟ್ಯೂಷನ್ನಿನಲ್ಲಿ ಆರ್ಟಿಕಲ್ ನಂ 335 ಈ ರೀತಿ ಹೇಳುತ್ತದೆ.

"The claims of the members of the scheduled castes and scheduled tribes shall be taken into consideration, consistently with the maintenance of efficiency of administration, in the making of appointments to services and posts in connection with the affairs of the Union or of State."

ಇದರ ಪ್ರಕಾರ ಪ್ರೊಮೋಷನಲ್ ವೇಕೆನ್ಸಿಯಲ್ಲಿ ಸಾಕಷ್ಟು ಪ್ರಾತಿನಿಧ್ಯ ಎಲ್ಲವೆಂದು ಹೇಳುತ್ತೇನೆ. ಇದರ ಬಗ್ಗೆ ನೋಡಿ ವರದಿ ಮಾಡಲು ಹಿಂದೆ ನಮ್ಮ ಸರ್ಕಾರದವರು ಬೀರಪ್ಪ ಕಮಿಟಿಯನ್ನು ನೇಮಕ ಮಾಡಿದ್ದಾರೆ. ಅದೇ ರೀತಿ ಈಗ ತುಂಕೋಳ್ ಕಮಿಶನ್ ರಿಪೋರ್ಟು ಪ್ರಕಾರ ೨೨ ಸಾವಿರ ಲೋಕಲ್ ಕ್ಯಾಂಡಿಡೇಟ್ಸ್‌ನ್ನು ನೇಮಕ ಮಾಡಿದ್ದಾರೆ. ಹೀಗೆ ನೇಮಕ ಮಾಡಿದಾಗ ಎಸ್.ಸಿ ಮತ್ತು ಎಸ್.ಟಿ.ಗೆ ನ್ಯಾಯವಾಗಿ ಬರಬೇಕಾದ ರಿಸರ್ವೇಶನ್ಸ್ ಬಾರದೆ ಬಹಳ ಅನ್ಯಾಯವಾಗಿದೆ. ಇದಲ್ಲದೆ ಬೀರಪ್ಪ ಕಮಿಟಿಯ ರಿಪೋರ್ಟನ್ನು ಸರ್ಕಾರ ಒಪ್ಪಿಕೊಂಡಿದ್ದರೂ ಈ ಜನರಿಗೆ ಎಷ್ಟು ಪ್ರಾತಿನಿಧ್ಯ ಕೊಡಬೇಕಾಗಿತ್ತೋ ಅಷ್ಟು ಪ್ರಾತಿನಿಧ್ಯ ಕೊಡಬಹುದಾಗಿತ್ತು.

5-30 P. M.

ಸರ್ಕಾರದವರು ಅಷ್ಟೊಂದು ಆಸಕ್ತಿಯಿಂದ ಬೀರಪ್ಪ ಸಮಿತಿಯನು ನೇಮಕ ಮಾಡಿ ಅವರು ಕೊಟ್ಟಿಂತಹ ವರದಿಯನ್ನು ಮೂಲೆಗೆ ತಳ್ಳಿದ್ದು ತುಂಬಾ ವಿಷಾದಕರವಾದದ್ದು. ಹರಿಜನ ಗಿರಿಜನರಿಗೆ ನ್ಯಾಯವಾಗಿ ರಾಜ್ಯಾಂಗಬದ್ಧವಾಗಿ ದೊರೆಯಬೇಕಾದ್ದು ದೊರೆತಿಲ್ಲ ಎಂದು ಬಹಳ ವಿಷಾದದಿಂದ ಹೇಳ ಬೇಕಾಗಿದೆ. ಕಾನ್‌ಸ್ಟಿಟ್ಯೂಷನ್ ಆರ್ಟಿಕಲ್ 16 (4) ರಲ್ಲಿ ಏನು ಹೇಳಿದ್ದಾರೆ ಎಂಬುದು ಎಲ್ಲರಿಗೂ ತೊತ್ತಿರುವ ವಿಷಯ. ಆರ್ಟಿಕಲ್ 335 ರ ಪ್ರಕಾರ ಪ್ರಮೋಷನಲ್ ವೇಕೆನ್ಸಿಯಲ್ಲಿಯೂ ಕೂಡ ಹರಿಜನ ಗಿರಿಜನರಿಗೆ ಪ್ರಾತಿನಿಧ್ಯ ಕೋಡಬೇಕು ಎಂದು ಮಾಡತಕ್ಕದ್ದು ಸರ್ಕಾರದ ಆದ್ಯ ಕರ್ತವ್ಯ. ಈಗ ಮೈಸೂರು ಸರ್ಕಾರದವರು ನಮ್ಮ ಹರಿಜನ ಗಿರಿಜನರಮೇಲೆ ಒಳ್ಳೆಯ ಆಸಕ್ತಿಯನ್ನು ಇಟ್ಟುಕೊಂಡು ಬಂದಿದ್ದಾರೆ. ಈಗ 25 ವರ್ಷಗಳಿಂದ ಆಗಿರತಕ್ಕ ಅನ್ಯಾಯಕ್ಕೆ ಈಗಿನ ಮಂತ್ರಿಮಂಡಲವನ್ನು ನಾನು ಆರೋಪಣೆ ಮಾಡುತ್ತಿಲ್ಲ. ಇವ್ವೊತ್ತು ನಮಗೆ ಏನು ಪ್ರಾತಿನಿಧ್ಯ ದೊರಕಿಸಬೇಕು ಎಂದು ಈಗಿನ ಮಂತ್ರಿಮಂಡಲದವರು ಒಂದು ಸಬ್‌ಕಮಿಟಿಯನ್ನು ಕೂಡ ರಚನೆ ಮಾಡಿದ್ದಾರೆ ಎಂದು ನಾನು ಕೇಳಿದ್ದೇನೆ. ಇದಕ್ಕೆ ನಾವು ಋಣಿ ಯಾಗಿದ್ದೇವೆ. ಮಂತ್ರಿ ಮಂತ್ರಿಮಂಡಲದವರಿಗೆ ಕೃತಜ್ಞತೆಯನ್ನು ಅರ್ಪಿಸುತ್ತೇವೆ. ಆದರೂ ಕೂಡ ಅವರು ಈ ಒಂದು ಸಬ್ ಕಮಿಟಿಯಲ್ಲಿ ಕೇಡರ್ ಅಂಡ್ ರಿಕ್ರೂಟಮೆಂಟ್ ರೂಲ್ಸ್‌ನ್ನು ಹೊಸದಾಗಿ ತಯಾರು ಮಾಡುವಾಗ ಕಾನ್‌ಸ್ಟಿಟ್ಯೂಷನ್ನಿನ 335 ನೇ ವಿಧಿಯನ್ನು ಗಮನದಲ್ಲಟ್ಟುಕೊಂಡು ಅವರಿಗೆ ಈಗ ಏನು ಅನ್ಯಾಯವಾಗಿದೆ ಆ ಅನ್ಯಾಯವನ್ನು ಸರಿಪಡಿಸುವುದಕ್ಕೋಸ್ಕರ ಸಾಕಷ್ಟು ಪ್ರಾತಿನಿಧವನ್ನು ಕೋಟ್ಟು ಆ ಅನ್ಯಾಯವನ್ನು ಸರಿಪಡಿಸುತ್ತಾರೆ ಎಂದು ನನಗೆ ಭರವಸೆ ಇದೆ. ನಮ್ಮ ಸೋಷಿಯಲ್ ವೆಲ್‌ಫೇರ್ ಮಂತ್ರಿಗಳಿದ್ದಾರೆ, ನನ್ನ ಪಬ್ಲಿಕ್ ವರ್ಕ್ಸ್ ಶಾಖೆಯ ಮಂತ್ರಿಗಳಿದ್ದಾರೆ ಅವರು ನಮಗೆ ಸಾಕಷ್ಟು ಪ್ರಾತಿನಿಧ್ಯ ವನ್ನು ದೊರಕಿಸುವುಕ್ಕೆ ಹೆಚ್ಚಿನ ಮುತವರ್ಜಿಯನ್ನು ವಹಿಸಿ ಅದನ್ನು ದೊರಕಿಸಿಕೊಡುತ್ತಾರೆ ಎಂದು ನಾನು ಹೇಳುತ್ತೇನೆ.

1961 ನೇ ಇಸವಿಯಲ್ಲಿ ಸುಮಾರು 800 ಜನ ಅಸಿಸ್ಟೆಂಟ್ ಇಂಜಿನಿಯರುಗಳನ್ನು ಲೋಕಲ್ ಕ್ಯಾಂಡಿಡೇಟ್‌ಗಳಾಗಿ ತೆಗೆದುಕೊಂಡಿದ್ದಾರೆ. ಅದರಲ್ಲಿ ನಮ್ಮ ಹರಿಜನ ಗಿರಿಜನರಿಗೆ 88 ಜನಗಳಿಗೆ ಪ್ರಾತಿನಿಧ್ಯ ದೊರೆಯಬೇಕಾಗಿತ್ತು. ಅದರಲ್ಲಿ ನಮಗೆ ಸಾಕಷ್ಟು ಪ್ರಾತಿನಿಧ್ಯ ದೊರೆಯಲಿಲ್ಲ, ಏತಕ್ಕೆಂದರೆ ಅವರನ್ನು ಲೋಕಲ್ ಕ್ಯಾಂಡಿಡೇಟ್ಸ್ ಆಗಿ ನೇಮಕ ಮಾಡಿದ್ದರಿಂದ ನಮಗೆ ಅದರಲ್ಲಿ ಸಾಕಷ್ಟು ಪ್ರಾತಿನಿಧ್ಯ ದೊರೆಯಲಿಲ್ಲ, ಆದ್ದರಿಂದ ಇನ್ನು ಮುಂದಾದರೂ ಯಾವ ಕಾರಣದಿಂದಲೂ ಲೋಕಲ್ ಕ್ಯಾಂಡಿಡೇಟ್ ಗಳನ್ನು ನೇಮಕ ಮಾಡಿಕೊಳ್ಳಬಾರದು. ರಿಕ್ರೂಟಮೆಂಟ್ ಕಮಿಟಿಯವರೇ ನೇಮಕಗಳನ್ನು ಮಾಡಬೇಕೆಂದು ನಾನು ಸರ್ಕಾರಕ್ಕೆ ಆರಿಕೆಮಾಡಿಕೊಳ್ಳುತ್ತೇನೆ.

ಆ ಮೇಲೆ ರೈಲ್ವೆ ಡಿಪಾರ್ಟಮೆಂಟನಲ್ಲಿ ರಂಗಾಚಾರಿಯವರ ಕೇಸಿನಲ್ಲಿ ಸುಪ್ರೀಮಕೋರ್ಟಿನಲ್ಲಿ (ರಂಗಾಚಾರಿ ವರ್ಸಸ್ ರೈಲ್ವೆ ಡಿಪಾರ್ಟಮೆಂಟ್) ಒಂದು ಡಿಸಿಷನ್ ಆಗಿದೆ. ಅದು ಏನಂದರೆ ರೈಲ್ವೆ ಡಿಪಾರ್ಟಮೆಂಟಿನಲ್ಲಿ ಪ್ರಮೋಷನಲ್ ವೇಕೆನ್ಸಿಯಲ್ಲಿ ಹರಿಜನಗಿರಿಜನರಿಗೆ ಪ್ರಾತಿನಿಧ್ಯ ಕೊಡಬೇಕು ಎಂದು ಆದ್ದರಿಂದ ಅಲ್ಲಿ ಈಗ ಪ್ರಮೋಷನಲ್ ವೇಕೆನ್ಸಿಯಲ್ಲಿ ಕೂಡ ಹರಿಜನ ಗಿರಿಜನರಿಗೆ ಪ್ರಾತಿನಿಧ್ಯವನ್ನು ಕೊಡುತ್ತಿದ್ದಾರೆ. ಪಂಜಾಬ್ ಗೌರ್ನಮೆಂಟಿನಲ್ಲಿ ಕೂಡ ಪ್ರಮೋಷನಲ್ ವೇಕೆನ್ಸಿಯಲ್ಲಿ ಹರಿಜನ ಗಿರಿಜನರಿಗೆ ಪ್ರಾತಿನಿಧ್ಯವನ್ನು ಕೊಡುತ್ತಿದ್ದಾರೆ. ಅಲ್ಲಿ ಹಿರಣ್ಯಯ ವರ್ಸಸ್ ರೈಲ್ವೆ ಡಿಪಾರ್ಟಮೆಂಟ್ ಸುಪ್ರೀಮ ಕೋರ್ಟಿನಲ್ಲಿ ಒಂದು ಜಡ್ಜಮೆಂಟ್ ಆಗಿ ಹರಿಜನ ಗಿರಿಜನರಿಗೆ ನ್ಯಾಯ ದೊರೆತಿದೆ. ಆದರಿಂದ ಸುಪ್ರೀಮ ಕೋರ್ಟಿ ಜಡ್ಜಮೆಂಟ್ ಪ್ರಕಾರ ಎಲ್ಲ ಡಿಪಾರ್ಟಮೆಂಟಿನಲ್ಲಿಯೂ ಕೂಡ ಹರಿಜನರಿಗೆ ನ್ಯಾಯ ಮತ್ತು ಪ್ರಾತಿನಿಧ್ಯ ದೊರೆತಿದೆಯೇ ? ಆ ರೀತಿ ರಾಜ್ಯಾಂಗದ ಪ್ರಕಾರ ಹರಿಜನ ಗಿರಿಜನರಿಗೆ ಪ್ರಾತಿನಿಧ್ಯ ದೊರೆಯುವುದಕ್ಕೆ ಸಾಕಷ್ಟು ಅವಕಾಶ ಇದ್ದರೂ ಕೂಡ ಅವರಿಗೆ ಅದನ್ನು ದೊರಕಿಸಿಕೊಡುವುದಕ್ಕೆ ಸರ್ಕಾರದವರು ಒಂದು ಪ್ರಯತ್ನವನ್ನು ನಡಸದೇ ಇರವುದಕ್ಕೆ ನಾನು ವಿಷಾದಪಡುತ್ತೇನೆ. ಹಿಂದೆ ಪಬ್ಲಿಕ್ ಸರ್ವೀಸ್ ಕಮಿಷನ್ನಿನಲ್ಲಿ ಡೈರೆಕ್ಟ್ ರೆಕ್ರೂಟಿಮೆಂಟಿನಲ್ಲಿ ಹರಿಜನಗಿರಿಜನರಿಗೆ ಎಲ್ಲಿಯಾದರೂ ಅನ್ಯಾಯವಾಗಿದ್ದರೆ ಅದನ್ನು ಪರದಿ ಮಾಡುವುದಕ್ಕೆ ಒಂದು ಇನ್‌ಸ್ಪೆಕನ್ ಸ್ಟಾಫ್‌ನ್ನು ಯೂನಿಟ್ ಆಫೀಸಿಗೆ ಕಳುಹಿಸಿ ಇನ್‌ಸ್ಪೆಕ್ ಮಾಡುವ ಒಂದು ಅವಾಕಾಶ ಇತ್ತು. ಅದು 1952ನೇ ಇಸವಿಯಲ್ಲಿ ಸಾರ್ವತ್ರಿಕ ಚನಾವಣೆ ಆದನಂತರ ತಪ್ಪಿಹೊಯಿತು. ಅದು ಇದ್ದಿದ್ದರೆ ಎಫಿಷಿಯಂಟಾಗಿ ಸರ್ಕಾರಿ ನೌಕರಿಯಲ್ಲಿ ಹರಿಜನಗಿರಿಜನರಿಗೆ ಪ್ರಾತಿನಿಧ್ಯವನ್ನು ದೊರಕಿಸುವುದಕ್ಕೆ ಕೆಲಸ ಮಾಡುತ್ತಿತ್ತು, ಅದನ್ನು ಈಗ ಪಬ್ಲಿಕ್ ಸರ್ವೀಸ್ ಕಮಿಷನ್ನಿನವರು ಅಬಾಲಿಷ್ ಮಾಡಿದರು. ಯಾವಕಾರಣದಿಂದ ಅದನ್ನು ಆ ರೀತಿ ಅಬಾಲಿಷ್ ಮಾಡಿದರೊ ಗೊತ್ತಿಲ್ಲ. ಈಗ ಸೋಷಿಯಲ್‌ವೆಲ್‌ಫೇರ್ ಡಿಪಾರ್ಟ್‌ಮೆಂಟಿನಲ್ಲಿ ಎಂಪ್ಲಾಯಮೆಂಟ್ ಸೆಲ್ ಎಂದು ಏನಿದೆ ಆ ಎಂಪ್ಲಾಯಮೆಂಟ್ ಸೆಲ್ಲಿನವರು ಎಷ್ಟು ಯೂನಿಟ್‌ಗಳಿಗೆ ಆಫೀಸರುಗಳನ್ನು ಕಳಹಿಸಿ ಇನ್‌ಸ್ಪೆಕನ್ ಮಾಡಿಸಿ ಎಷ್ಟು ಪರದಿಗಳನ್ನು ಅವರು ಕೊಟ್ಟಿದ್ದಾರೆ, ಎಷ್ಟು ಅನ್ಯಾಯವಾಗಿದ್ದನ್ನು ಸರ್ಕಾರದವರ್ಮ ಗಮನಿಸಿ ಸರಿಪಡಿಸಿದ್ದಾರೆ ಎನ್ನುವ ಬಗ್ಗ ನನಗೆ ಮಾನ್ಯ ಮಂತ್ರಿಗಳು ಉತ್ತರವನ್ನು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಹರಿಜನ ಗಿರಿಜನರಿಗೆ ಸರ್ಕಾರಿ ನೌಕರಿಯಲ್ಲಿ ಎಷ್ಟರಮಟ್ಟಿಗೆ ಪ್ರಾತಿನಿಧ್ಯವನ್ನು ಕೂಟ್ಟಿದ್ದಾರೆ ಎನ್ನುವ ಬಗ್ಗೆ, ಸರ್ಕಾರದ ವರದಿಯ ಪ್ರಕಾರ ನೋಡುವುದಾದರೆ ಬೆಂಗಳೂರು ಯೂನಿವರ್ಸಿಟಿಯಲ್ಲಿ ಇತ್ತೀಚೆಗೆ 80 ಆಪಾಯಂಟಿಮೆಂಟ್‌ಗಳನ್ನೆ ಮಾಡಿದ್ದಾರೆ ಅದರಲ್ಲಿ ಹರಿಜನಗಿರಿಜನರಿಗೆ ಒಂದು ಅಪಾಯಿಂಟ್‌ಮೆಂಟ್ ಕೂಡ ಕೊಟ್ಟಿಲ್ಲ. ಬೆಂಗಳೂರು ಯೂನಿವರ್ಸಿಟಿಯಾಗಲೀ ಮೈಸೂರು ಯೂನಿವರ್ಸಿಟಿಯಾಗಲೀ ಅಥವಾ ಕರ್ನಾಟಕ ಯೂನಿವರ್ಸಿಟಿಯಾಗಲೀ ಅಥವಾ ಅಗ್ರಿಕಲಚರಲ್ ಯೂನಿವರ್ಸಿಟಿಯಾಗಲೀ ಇವುಗಳಲ್ಲಿ ಹರಿಜನಗಿರಿಜನರಿಗೆ ಪ್ರಾತಿನಿಧ್ಯ ಕೊಟ್ಟಿಲ್ಲವೆಂದು ಬಹಳ ವಿಷಾದದಿಂದ ಹೇಳಬೇಕಾಗಿದೆ. ಬೆಂಗಳೂರು ಯೂನಿವರ್ಸಿಟಿಯಲ್ಲಿ 200 ಹುದ್ದೆಗಳಲ್ಲಿ ಹರಿಜನ ಗಿರಿಜನರಿಗೆ 2 ಹುದ್ದೆಗಳನ್ನು ಕೊಟ್ಟಿದ್ದಾರೆ. ಡಿವಿಜನಲ್ ಕಮಿಷನರ್ ಆಫೀಸಿನಲ್ಲಿ ಏನೂ ಕೊಟ್ಟಿಲ್ಲ. 24 ಜನ ಐ.ಎ.ಎಸ್., ಆಧಿಕಾರಿಗಳಲ್ಲಿ ಹರಿಜನ ಗಿರಿಜನರಿಗೆ ಒಂದು ಹುದ್ದೆಯನ್ನೂ ಕೊಟ್ಟಿಲ್ಲ. ಹಾಗೆಯೇ ಐ.ಎ.ಎಸ್., ಐ.ಪಿ.ಎಸ್. ಐ.ಎಫ್ ಎಸ್. ಹುದ್ದೆಗಳಲ್ಲಿಯೂ ಹರಿಜನಗಿರಿಜನರಿಗೆ ಪ್ರಾತಿನಿಧ್ಯವನ್ನು ಕೊಟ್ಟಿಲ್ಲ. ಪಬ್ಲಿಕ್‌ವರ್ಕ್ಸ್ ಡಿಪಾರ್ಟಮೆಂಟನಲ್ಲಂತೂಬಹಳ ಅನ್ಯಾಯವಾಗಿದೆ. ಅಲ್ಲಿ ಹರಿಜನಗಿರಿಜನರಿಗೆ ಆಗಿರುವ ಅನ್ಯಾಯವನ್ನು ಸಹಿಸುವುದಕ್ಕೆ ಸಾಧ್ಯವಾಗವುದಿಲ್ಲ. ನಮಗೆ ಅನ್ಯಾಯವಾದಾಗ ಹೇಳದೆ ವಿಧಿಯಿಲ್ಲ ಅದಕ್ಕಾಗಿ ನಾನು ಇದನ್ನು ಹೇಳುತ್ತಿದ್ದೇನೆ. ಚೀಫ್ ಇಂಜಿನಿಯರ್ ಯೂನಿಟ್‌ನಲ್ಲಿ 10 ವೇಕೆನ್ಸಿಗಳನ್ನು ಭರ್ತಿಮಾಡಿ ಹರಿಜನಗಿರಿಜನರಿಗೆ ಒಂದೂ ವೇಕೆನ್ಸಿಯನ್ನು ಕೊಟ್ಟಿಲ್ಲ. ಸೂಪರಿಂಟೆಂಡೆಂಟ್ ಇಂಜಿನಿಯರ್ ಅವರ ಆಫೀಸಿನಲ್ಲಿ 53 ಪೋಸ್ಟ್‌ಗಳನ್ನು ನೇಮಕ ಮಾಡಿದ್ದಾರೆ. ಆ ವೈಕೆ ಒಂದು ಹುದ್ದೆಯನ್ನೂ ಹರಿಜನಗಿರಿಜನರಿಗೆ ಕೊಟ್ಟಿಲ್ಲ. ಎಗ್ಜಿಕ್ಯೂಟೀವ್ ಇಂಜಿನಿಯರ್ ಆಫೀಸಿನಲ್ಲಿ 200 ಹುದ್ದೆಗಳಿಗೆ 12 ಜನಗಳಿಗೆ ಹರಿಜನಗಿರಿಜನರಿಗೆ ಕೊಟ್ಟಿದ್ದಾರೆ. ಅಸಿಸ್ಟೆಂಟ್ ಇಂಜಿನಿಯರ್ ಆಫೀಸಿನಲ್ಲಿ 1000 ಹುದ್ದೆಗಳಲ್ಲಿ 20 ಜನಗಳಿಗೆ ಹರಿಜನಗಿರಿಜನರಿಗೆ ಕೊಟ್ಟಿದ್ದಾರೆ. ಅಗ್ರಿಕಲ್ಚರಲ್ ಡಿಪಾರ್ಟ್‌ಮೆಂಟ್ ಡೈರೆಕ್ಟರ್ ಆಫೀಸಿನಲ್ಲಿ ಹರಿಜನರಿಗೆ ಏನೂ ಕೊಟ್ಟಿಲ್ಲ. ಜಾಯಿಂಟ್ ಡೈರೆಕ್ಟರ ಆಫೀಸಿನಲ್ಲಿ 8 ಹುದ್ದೆಗಳಲ್ಲಿ ಒಂದು ಹುದ್ದೆಯನ್ನು ಮಾತ್ರ ಕೊಟ್ಟಿದ್ದಾರೆ. ಡೆಪ್ಯುಟಿ ಡೈರೆಕ್ಟರ ಆಫೀಸಿಲ್ಲಿ ಏನೂ ಕೊಟ್ಟಿಲ್ಲ. ಅಸಿಸ್ಟೆಂಟ್ ಡೈರೆಕ್ಟರ ಆಫೀಸಿನಲ್ಲಿಯೂ ಏನೂ ಕೊಟ್ಟಿಲ್ಲ. ಜಾಯಿಂಟ್ ಡೈರೆಕ್ಟರ ಆಫೀಸಿನಲ್ಲಿ 4 ಹುದ್ದೆಗಳಲ್ಲಿ ಒಂದು ಹುದ್ದೆಯನ್ನು ಮಾತ್ರ ಕೊಟ್ಟಿದ್ದಾರೆ. ಮೆಡಿಕಲ್ ಡಿಪಾರ್ಟಮೆಂಟ್ ಡೈರೆಕ್ಟರವರ ಆಫೀಸಿನಲ್ಲಿ ಒಂದೂ ಕೊಟ್ಟಿಲ್ಲ. ಎಜುಕೇಷನ್ ಡಿಪಾರ್ಟಮೆಂಟಿನಲ್ಲಿ, ಒಂದೂ ಹರಿಜನಗಿರಿಜನರಿಗೆ ಪ್ರಾತಿನಿಧ್ಯ ಕೊಟ್ಟಿಲ್ಲ. ಜೂಡಿಷಿಯಲ್ ಡಿಪಾರ್ಟಮೆಂಟಿನಲ್ಲಿ, ಕೋಆಪರೇಟೀವ್ ಡಿಪಾರ್ಟಮೆಂಟಿನಲ್ಲಿ ಕಮರ್ಷಿಯಲ್ ಟ್ಯಾಕ್ ಆಫೀಸಿನಲ್ಲಿ ಡಿಪಾರ್ಟಮೆಂಟಿನಲ್ಲಿ, ಹಾರ್ಟಿಕಲ್‌ಚರಲ್ ಡಿಪಾರ್ಟಮೆಂಟಿನಲ್ಲಿ. ಡೈರೆಕ್ಟರ್ ಆಫ್ ಕೊಲಿಜಯೇಟ್ ಎಜುಕೇಶನ್ ಆಫೀಸಿನಲ್ಲಿ

(SRI G. PUTTASWAMY)

ಹಾಗು ಇನ್ನೂ ಅನೇಕ ನೌಕರಿಗಳಲ್ಲಿ ಹರಿಜನಗಿರಿಜನರಿಗೆ ಸಾಕಷ್ಟು ಪ್ರಾತಿನಿಧ್ಯ ಸಿಕ್ಕಿಲ್ಲ ಇದೇರೀತಿ ಇನ್ನೂ ಅನೇಕ ಆಫೀಸುಗಳಲ್ಲಿ ಹರಿಜನಗಿರಿಜನರಿಗೆ ಪ್ರಾತಿನಿಧ್ಯ ಕೊಟ್ಟಿಲ್ಲದೆ ಇರುವುದು ನಮಗೆ ಕಂಡುಬಂದಿದೆ. ಇಂದು ನಿಜವಾಗಿಯೂ ಬಹಳ ವಿಷಾದಕರವಾದ ವಿಷಯ. ಸ್ವೀಪರ್ಸ್ ಕೆಲಸಕ್ಕೆ ಮಾತ್ರ ಬೇರೆ ಯಾರೂ ಬರುವುದಿಲ್ಲ ಎಂದು 100 ಕ್ಕೆ 100 ಜನಗಳಿಗೆ ಹರಜನಗಿರಿಜನರಿಗೆ ಕೊಟ್ಟಿದ್ದಾರೆ. ಸಾಮಾನ್ಯವಾಗಿ ಈ ಮಾನ್ಯ ಸಭೆಯ ಸದಸ್ಯರಿಗಾಗಲೀ, ಅಥವಾ ಸಾರ್ವಜನಿಕರಿಗಾಗಲ್ಲೀ ಹರಿಜನಗಿರಿಜನರಿಗೆ ಸರ್ಕಾರಿ ನೌಕರಿ ಯಲ್ಲಿ ಸಾಕಷ್ಟು ಪ್ರಾತಿನಿಧ್ಯ ಸಿಕ್ಕುತ್ತಿದೆ ಎಂದು ಭಾವನೆಯನ್ನು ಇಟ್ಟುಕೊಂಡಿರುವ ಹಾಗೆ ಕಾಣುತ್ತದೆ, ಆದರೆ ಅಂಕಿ ಅಂಶಗಳನ್ನು ನೋಡಿದರೆ ನಿಜವಾದ ಪರಿಸ್ಥಿತಿ ಎಷ್ಟರಮಟ್ಟಿಗೆ ಅವರಿಗೆ ಪ್ರಾತಿನಿಧ್ಯ ಸಿಕ್ಕಿದೆ ಎಂಬುದು ಗೊತ್ತಾಗುತದೆ. ಬೀರಪ ಕಮಿಟಿಯವರು ಮತ್ತು ಎಳೆಯಪೆರುಮಾಳ್ ಕಮಿಟಿಯವರು ರಾಜ್ಯಾಂಗದ ಪ್ರಕಾರ ಹರಿಜನಗಿರಿಜನರಿಗೆ ಸರ್ಕಾರಿ ನೌಕರಿಯಲ್ಲಿ ಪ್ರಾತಿನಿಧ್ಯವನ್ನು ಕೊಡಬೇಕೆಂದು ಅವಕ್ಕೆ ವರದಿಯಲ್ಲಿ ಕಳಕಳಿಯಿಂದ ಹೇಳಿದ್ದಾರೆ.

ಅನೇಕ ವರದಿಗಳನ್ನು ಅವರು ಕೊಟ್ಟಿದ್ದಾರೆ. ಆದರ ಪ್ರಕಾರ ಪ್ರಾತಿನಿಧ್ಯ ದೊರಕಿಸಿಕೊಡುವುದಕೆ ಪ್ರಯತ್ನ ಮಾಡಲಿಲ್ಲ. ಯಾರ್ಡಿ ಕಮಿಟಿ ಪಾರ್ಲಿಮೆಂಟಿನಿಂದ ರಚಿತವಾಗಿತ್ತು. ಅವರು ಕೆಲವು ಆದೇಶಗಳನ್ನು ಕೊಟ್ಟರು ಅದರ ಮೇಲೂ ಸಹ ರಾಜ್ಯಸರ್ಕಾರಗಳು ಕಾರ್ಯಕ್ರಮ ಕೈಕೊಳ್ಳಲಿಲ್ಲ. ಪ್ರತಿ ವರ್ಷವೂ ಪಾರ್ಲಿಮೆಂಟ್ ಮುಂದೆ ಷೆಡ್ಯೂಲ್ ಕ್ಯಾಸ್ಟ್ ಕಮಿಷನ್ ವರದಿ ಚರ್ಚೆಗೆ ಬರುತ್ತದೆ. ಅಲ್ಲಿ ಚರ್ಚೆಯಾಡ ಮೇಲೆ ಹಿಂದುಳಿದ ಪಂಗಡಗಳ ಬಗ್ಗೆ ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂಬ ಬಗ್ಗೆ ರಾಜ್ಯಸರ್ಕಾರಗಳಿಗೆ ವರದಿ ಬರುತ್ತದೆ. ಆದರ ಬಗ್ಗೆಯೂ ಸಹ ಸೂಕ್ತ ಕಾರ್ಯಕ್ರಮವನ್ನು ತೆಗೆದುಕೊಳ್ಳದಿರುವುದು ವಿಷಾದಕರವೆಂದು ಹೇಳಬೇಕಾಗಿದೆ. ಕೇರಳಾ ಪಂಜಾಬ್ ಮುಂತಾದ ರಾಜ್ಯಗಳಲ್ಲಿ ಪ್ರಮೋಷನ್ ಕೊಡುವಾಗಲೂ ಸಹ ಹಿಂದುಳಿದ ಪಂಗಡದವರಿಗೆ ಸೂಕ್ತ ಪ್ರಾತಿನಿಧ್ಯ ಕೊಡುತ್ತಿದ್ದಾರೆ.

"Without prejudice to the seniority of others, tenure appointments may be created"

ಎಂದು ಇದೆ. ಆದರೂ ಎಷ್ಟೋ ಟೆನ್ಯೂರ್ ಅಪಾಯಿಂಟ್‌ಮೆಂಟ್‌ಗಳನ್ನು ಬೇರೆಯವರಿಗೆ ಕೊಟ್ಟ ನಿದರ್ಶನಗಳಿವೆ. ಹರಿಜನ ಮತ್ತು ಗಿರಿಜನರಿಗೆ ಂಂತಹ ಒಂದು ಸೌಭಾಗ್ಯ ದೊರಕದಿರುವುದು ವಿಷಾದಕರ ಸಂಗತಿ. ದುಡಿಯುವ ನೌಕರರಿಗೆ ಸೂಕ್ತ ಪ್ರಾತಿನಿಧ್ಯ ಕೊಡದಿದ್ದರೆ ಎಫಿಷಿಯೆನ್ಸಿ ಹೋಗಿಬಿಡುತ್ತದೆ. ಆವ ಒಂದು ಜನಾಂಗದವರೇ ಆಗಲಿ, ಅನೆಸ್ಥೆಯಾಗಿದ್ದರೆ ಪ್ರೋತ್ಸಾಹ ಕೊಡಬೇಕು: ಇದುಸರ್ಕಾರದ ಕರ್ತವ್ಯ. ಕೇಂದ್ರ ಸರ್ಕಾರದಿಂದ ಅನೇಕ ಸರ್ಕ್ಯುಲರ್‌ಗಳು ರಾಜ್ಯಸರ್ಕಾರಗಳಿಗೆ ಬರುತ್ತವೆ. ಆದರೆ ಅದನ್ನು ಕಾರ್ಯಗತ ಮಾಡುತ್ತಿಲ್ಲ. ಹರಿಜನ ಮತ್ತು ಗಿರಿಜನ ಪಂಗಡದವರಿಗೆ ಬೇರೆಯವರಿಗಿಂತ ಎಫಿಷಿಯೆನ್ಸಿ ಕಡಿಮೆ ಇದ್ದರೂ ಸಹ ವೈಟೇಜ್ ಕೊಟ್ಟು ಪ್ರಮೋಷನ್ ಕೊಡಬೇಕೆಂದು ಕೇಂದ್ರದವರು ಹೇಳಿದ್ದರೂ ಸಹ ಅದನ್ನು ಪಾಲಿಸುತ್ತಿಲ್ಲ. ಈ ವಿಚಾರದಲ್ಲಿ ಹಿಂದೆ ಯೂನಿಯನ್ ಎಜುಕೇಷನ್ ಮಿನಿಸ್ಟರ್ ಆಗಿದ್ದ ಶ್ರೀ ದಾತರ್ ಅವರು ಅನೇಕ ಸರ್ಕ್ಯುಲರ್‌ಗಳನ್ನು ಕಳಿಸಿದ್ದರೂ ಸಹ ಒಂದನ್ನೂ ಕಾರ್ಯಗತ ಮಾಡುತ್ತಿಲ್ಲ. ಹರಿಜನ ಮತ್ತು ಗಿರಿಜನರ ಬಗ್ಗೆ ಹಿರಿಯ ಅಧಿಕಾರಿಗಳಿಗೆ ಮತ್ತು ಮಂತ್ರಿಮಂಡಲದವರಿಗೆ ಆಸಕ್ತಿ ಇದ್ದರೂ 'ಏತಕ್ಕೆ ಸೂಕ್ತ ಪ್ರಾತಿನಿಧ್ಯ ಕೊಡುತ್ತಿಲ್ಲವೆಂಬುದು ನನಗೆ ಅರ್ಥವಾಗುತ್ತಿಲ್ಲ. ಕೆಲವೊಂದು ಆಜ್ಞೆಗಳನ್ನು ಕಾರ್ಯಗತ ಮಾಡಲು ಕಾನೂನಿನ ತೊಡಕಿದೆ ಎಂದು ಅಧಿಕಾರಿಗಳು ಹೇಳುತ್ತಿದ್ದಾರೆ. ಈಗ ಮಂತ್ರಿ ಮಂಡಲದಲ್ಲಿ ಒಂದು ಸಬ್-ಕಮಿಟಿ ಇದೆ. ಆ ಕಮಿಟಿಯಲ್ಲಿ ಲಾ ಮಂತ್ರಿಗಳು ಸಹ ಇದ್ದಾರೆಂದು ಕೇಳಿದ್ದೇನೆ. ಮತ್ತು ಹರಿಜನರ ಮೇಲೆ ಪ್ರೀತಿ ಇರತಕ್ಕಂಥ ಮಂತ್ರಿಗಳು ಇದ್ದಾರೆಂದು ಕೇಳಿದ್ದೇನೆ. ಆದ್ದರಿಂದ ಅವರೆಲ್ಲರೂ ಹಿಂದುಳಿದವರಿಗೆ ಅನ್ಯಾಯವಾಗದಂತೆ ನೋಡಿಕೊಳ್ಳಬೇಕು. ಅನೇಕ ಹರಿಜನ ಮತ್ತು ಗಿರಿಜನರು ಹಿಂಬಡ್ತಿ ಹೊಂದ ಬೇಕಾದ ಪರಿಸ್ಥಿತಿ ಬಂದಿದೆ. ಆ ರೀತಿ ಆಗದಂತೆ ನೋಡಿಕೊಳ್ಳಬೇಕೆಂದು ಕಳಕಳಿಯಿಂದ ಬೇಡಿಕೊಳ್ಳುತ್ತೇನೆ. ಇರತಕ್ಕಂಥ ತೊಂದರೆಯನ್ನು ಬೇಗ ನಿವಾರಣೆ ಮಾಡಬೇಕು. ಷೆಡ್ಯೂಲ್‌ಕ್ಯಾಸ್ಟ್‌ಗೆ ಸೇರಿದ ಇಬ್ಬರು ಮಂತ್ರಿಗಳು ಮಂತ್ರಿಮಂಡಲದಲ್ಲಿರುವುದರಿಂದ ನಮ್ಮ ಜನಾಂಗದವರಿಗೆ ತೊಂದರೆ ಯಾಗದಂತೆ ನೋಡಿಕೊಳ್ಳಬೇಕು. ಅವರಿಂಗಳು ಇದ್ದೂ ಸಹ ಅನ್ಯಾಯವಾಗುವುದು ಸರಿಯಲ್ಲ. ಕಳೆದ ೨೫ ವರ್ಷಗಳಿಂದಲೂ ನಮಗೆ ಅನ್ಯಾಯವಾಗುತ್ತಿದೆ. ಹಿಂದಿನ ಮಂತ್ರಿ ಮಂಡಲದವರಿಗೆ ದೇವರು ಒಳ್ಳೆಯ ಬುದ್ಧಿ ಕೊಡಲಿಲ್ಲವೋ ಏನೋ ಗೊತ್ತಿಲ್ಲ. ಈಗಿನ ಮಂತ್ರಿಮಂಡಲದವರಾದರೂ ಸಹ ಅನ್ಯಾಯವಾಗದಂತೆ ನೋಡಿಕೊಳ್ಳಬೇಕು. ಚುನಾವಣೆಯ ಸಮಯದಲ್ಲಿ ಓಟು ತೆಗೆದುಕೊಳ್ಳಲು ಹರಿಜನರು ಬೇಕು. ಆದರೆ

ಅವರಿಗೆ ಅನುಕೂಲ ಮಾಡಿಕೊಡುವುದು ಬೇಡ ಎಂದು ಹೇಳುವುದು ಸರಿಯಲ್ಲ. ಓಟು ತೆಗೆದು ಕೊಳ್ಳುವುದಕ್ಕೆ ಎಷ್ಟು ಆಸಕ್ತಿ ಇರುತ್ತದೋ ಅಷ್ಟೇ ಒಂದು ಆಸಕ್ತಿಯಿಂದ ಕೆಲಸ ಮಾಡಬೇಕು. ನಿಸ್ಪಕ್ಷ ಪಾತದಿಂದ ಧರ್ಮದಿಂದ, ಸತ್ಯದಿಂದ ಮತ್ತು ಆಸಕ್ತಿಯಿಂದ ಓಟು ಮಾಡುವವರು ಎಂದರೆ ಹರಿಜನರು. ಆದರೆ-ಅವರೇ ಇಂದು ವಿಧ್ಯಾಭ್ಯಾಸ ಕ್ಷೇತ್ರದಲ್ಲಿ ಮತ್ತು ಇತರ ಕ್ಷೇತ್ರಗಳಲ್ಲಿ ಹಿಂದುಳಿದಿದ್ದಾರೆ ಆರ್ಥಿಕವಾಗಿ, ಶೈಕ್ಷಣಿಕವಾಗಿ ಮತ್ತು ಸಾಮಾಜಿಕವಾಗಿ ಇವರು ಮುಂದೆ ಬರಲು ಸರ್ಕಾರದವರು ಅನುಕೂಲ ಮಾಡಿ ಕೊಡಬೇಕು. ನಮ್ಮ ಜನರೇನೋ ಹುಳುಗಳುಹಾಗೆ ೪೦ ಲಕ್ಷ ಮಂದಿ ಇದ್ದಾರೆ. ಆದರೆ ಸರ್ಕಾರಿ ನೌಕರಿಯಲ್ಲಿ ವ್ಯವಸಾಯ ಕ್ಷೇತ್ರದಲ್ಲಿ ಕೈಗಾರಿಕಾ ಉದ್ಯಮಗಳಲ್ಲಿ, ಆಸ್ಪತ್ರೆಗಳ ನೌಕರಿಯಲ್ಲಿ ಬಹಳ ಕಡಿಮೆಸಂಖ್ಯೆಯಲ್ಲಿ ದ್ದಾರೆ. ಇವರು ಆಸ್ಪತ್ರೆಗಳಲ್ಲಿ ಔಷಧಗಳನ್ನು ಸಹ ತೆಗೆದುಕೊಳ್ಳುವುದಿಲ್ಲ. ಮಾರಮ್ಮನ ಯಂತ್ರಗಳನ್ನು ಕಟ್ಟಿಕೊಳ್ಳುತ್ತಾರೆ. ಆ ಖರ್ಚು ಸಹ ಸರ್ಕಾರಕ್ಕೆ ಉಳಿಯುತ್ತದೆ. ಸರ್ಕಾರದ ಆಸ್ಪತ್ರೆಗಳಲ್ಲಿ ಸಹ ಅವರು ಹೆಚ್ಚಾಗಿ ಓಡಾಡುವುದಿಲ್ಲ.

ಉಪಾಧ್ಯಕ್ಷರು: ರೂಲ್ ೪೯ರ ಪ್ರಕಾರ ತಾವು ಬ್ರೀಫ್ ಸ್ಟೇಟ್‌ಮೆಂಟ್ ಮಾಡಬೇಕು.

ಶ್ರೀ ಜಿ. ಪುಟ್ಟಸ್ವಾಮಿ: ನಮ್ಮ ಜನಾಂಗದ ಬಗ್ಗೆ ಮಾನ್ಯ ಅಧ್ಯಕ್ಷರು ಸಹ ಸಹಾನುಭೂತಿಯುಳ್ಳವರಾಗಿದ್ದಾರೆ ಅದಕ್ಕಾಗಿ ತಮಗೂ ಕೃತಜ್ಞತೆಯನ್ನು ಈ ಸಂದರ್ಭದಲ್ಲಿ ಅರ್ಪಿಸುತ್ತೇನೆ. ಮುಖ್ಯವಾಗಿ ನಮ್ಮ ಜನಾಂಗದವರಿಗೆ ಅನ್ಯಾಯವಾಗದಂತೆ ಸರ್ಕಾರದವರು ನೋಡಿಕೊಳ್ಳಬೇಕು ಅವರಿಗೆ ಅತೃಪ್ತಿಯಾಗದಂತೆ ಸರ್ಕಾರ ನೌಕರಿಯಲ್ಲಿ ಪ್ರಾತಿನಿಧ್ಯ ಕೊಡಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೆನೆ. ಯಾವ ಕಾರಣದಿಂದಲೂ ಲೋಕಲ್ ಅಭ್ಯರ್ಥಿಗಳಿಗಾಗಲೀ, ಸರ್ವಿಸಸ್‌ನಲ್ಲಿ ಇರುವವರಿಗಾಗಲೀ, ಅನ್ಯಾಯವಾಗದಂತೆ ನೋಡಿಕೊಳ್ಳಬೇಕು. ಮುಖ್ಯವಾಗಿ ಹಿಂಬಡ್ತಿ ಮಾಡಬಾರದು. ಡೆಪ್ಯೂಟೇಷನ್‌ಲ್ ತಹಶೀಲ್ದಾರರ ಸೀನಿಯಾರಿಟಿ ಬಗ್ಗೆ ರಿಟ್ ಹಾಕಲಾಗಿದೆ. ಆ ಸಮಯದಲ್ಲಿಯೂ ಸಹ ಹಿಂಬಡ್ತಿಯಾಗದಂತೆ ನೋಡಿಕೊಳ್ಳಬೇಕು. ಇಂಟರ್‌ಸ್ಟೇಟ್ ಸೀನಿಯಾರಿಟಿ ಲಿಸ್ಟ್ ತಯಾರಾಗದೇ ಇರುವುದರಿಂದ ನಮಗೆ ಅನ್ಯಾಯವಾಗಿದೆ. ಅದನ್ನು ಬೇಗ ಇತ್ಯರ್ಥ ಮಾಡಬೇಕು ನಾನುಕೇಳಿದ ಎಲ್ಲ ಅಂಶಗಳಿಗೂ ಸಹ ಮಾನ್ಯ ಮಂತ್ರಿಗಳು ತೃಪ್ತಿಕರವಾದ ಉತ್ತರ ಕೊಡುತ್ತಾರೆಂದು ನಂಬಿ, ಅಧ್ಯಕ್ಷರಿಗೆ ಮಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಚ್.ಎಂ. ಚೆನ್ನಬಸಪ್ಪ (ಲೋಕೋಪಯೋಗಿಶಾಖೆಯ ಮಂತ್ರಿಗಳು): ಮಾನ್ಯ ಅಧ್ಯಕ್ಷರೇ, ಸುಮಾರು ಅರ್ಧಗಂಟೆ ಕಾಲ ಭಾಷಣ ಮಾಡಿದ ಶ್ರೀಮಾನ್ ಪುಟ್ಟಸ್ವಾಮಿಯವರು ಹೇಳಿದ್ದು ಒಂದೇ ವಿಷಯ. ಏನೆಂದರೆ ಹರಿಜನ ಮತ್ತು ಗಿರಿಜನರಿಗೆ ಸರಿಯಾದ ಪ್ರಾತಿನಿಧ್ಯ ಕೊಡಬೇಕು ಎಂಬುದು. ಅವರು ಮಾತ ಆಡುವಾಗ ಎಲ್ಲಿಂದ ಎಲ್ಲಿಯವರೆಗೆ ಸುತ್ತಿಕೊಂಡು ಬಂದರೂ, ಅವೇ ವಿಷಯಕ್ಕೆ ಮತ್ತೆ ಬಂದರು. ಸಾಮಾನ್ಯವಾಗಿ ಹಿಂದುಳಿದ ಪಂಗಡದವರಿಗೆ ಅಂದರೆ ಹರಿಜನ ಮತ್ತು ಗಿರಿಜನರಿಗೆ ವಿಶೇಷ ರೀತಿಯ ಪ್ರಾತಿನಿಧ್ಯವನ್ನು ಕಾದಿರಿಸಬೇಕೆಂದು ರಾಜ್ಯಾಂಗದಲ್ಲಿ ಹೇಳಿದೆ.

ಶ್ರೀ ಕಾಗೋಡು ತಿಮ್ಮಪ್ಪ : ರಾಜ್ಯಾಂಗದಲ್ಲಿ ಹೇಳಿದ್ದರೂ ಕೊಟ್ಟಿಲ್ಲ.

ಶ್ರೀ ಎಚ್. ಎಂ. ಚೆನ್ನಬಸಪ್ಪ : ರಾಜ್ಯಾಂಗದಲ್ಲಿ ಹೇಳಿರುವುದನ್ನು ಕಟ್ಟುನಿಟ್ಟಾಗಿ ಪಾಲಿಸಿಕೊಂಡು ಬರುವುದು ಸರ್ಕಾರದ ಕರ್ತವ್ಯವಾಗಿದೆ. ಇದರಲ್ಲಿ ಏನಾದರು ಲೋಪದೋಷ ಮಾಡಬೇಕೆಂಬುದು ಸರ್ಕಾರಕ್ಕೆ ಯಾತಃಕಿಂಚಿತ್ತೂ ಇಲ್ಲ ಅಡಿ ನಿಸ್ಟೇಟಿವ್ ಮಿಷಿನರಿ ಬಹಳ ದೊಡ್ಡದು. ಆದ್ದಕ್ಕಾಗಿ ಈ ಹಿಂದುಳಿದ ಪಂಗಡದವರಿಗೆ ರಾಜ್ಯಾಂಗವನ್ನು ಅಂಗೀಕಾರ ಮಾಡಿದಮೇಲೆ ರೆಕ್ರೂಟ್‌ಮೆಂಟ್ ಮಾಡುವ ಕಾಲಕ್ಕೆ ಇಷ್ಟು ಪರ್ಸೆಂಟೇಜ್ ಕಾದಿರಿಸಬೇಕೆಂದು ನಿಯಮ ಮಾಡಲಾಯಿತು, ಆ ಒಂದು ನಿಯಮವನ್ನು ಮೊಟಕು ಮಾಡಿಲ್ಲ. ಒಂದು ವೇಳೆ ರೆಕ್ರೂಟ್‌ಮೆಂಟ್ ಮಾಡುವ ಕಾಲಕ್ಕೆ ಏನಾದರು ಲೊಪವಾಗಿದ್ದರೆ ಅದನ್ನು ಸರಿಪಡಿಸತಕ್ಕಂಥದ್ದು. ಸರ್ಕಾರದ ಕರ್ತವ್ಯ, ಹೊಸದಾಗಿ ರೆಕ್ರೂಟ್‌ಮೆರಟ್ ಮಾಡುವ ಕಾಲಕ್ಕೆ ಷೆಡ್ಯೂಲ್ ಕ್ಯಾಸ್ಟ್ ಮತ್ತು ಷೆಡ್ಯೂಲ್ ಟ್ರೈಬ್ಸ್‌ನವರಿಗೆ ಮೀಸಲು ಸ್ಥಾನಗಳನ್ನು ಕಾದಿರಿಸಿ ಉಳಿಕೆ

(ಶ್ರೀ ಹೆಚ್.ಎಂ. ಚನ್ನಬಸಪ್ಪ)

ಚಾಗಗಳನ್ನು ಬೇರೆಯವರಿಗೆ ಕೊಡುವ ಬಗ್ಗೆ ಸರ್ಕಾರ ಶುದ್ಧಿ ಮತ್ತು ಅಸಕ್ತಿಯಿಂದ ಕೆಲಸ ಮಾಡುತ್ತದೆಂಬ ಸಂಪೂರ್ಣವಾದ ಭರವಸೆಯನ್ನು ಮಾನ್ಯ ಸಭೆಗೆ ಕೊಡುತ್ತೇನೆ.

ಇದರಲ್ಲಿ ಏನಾದರೂ ಲೋಪದೋಷಗಳು ಬಂದರೂ ಅದನ್ನು ಆಗಿಂದಾಗ್ಗೆ ಸರಕಾರದ ಗಮನಕ್ಕೆ ತಂದರೆ ಅದರ ಬಗ್ಗೆ ಹೆಚ್ಚು ಗಮನ ಕೊಟ್ಟು ಅವರ ಕಾರ್ಯಾಚರಣೆಗೆ ಅನುಕೂಲಮಾಡಿ ಸರಕಾರ ಸರಿಪಡಿಸುತ್ತದೆ ಎಂದು ಇಲ್ಲಿ ಭರವಸೆ ಕೊಡುತ್ತೇನೆ. ಇದರ ಕಾರ್ಯಾಚರಣೆಗಳಿಗಾಗಿ ಕೋರ್ಟಿಗೆ ತೆಗೆದುಕೊಂಡು ಹೋಗಬೇಕು ಎನ್ನುವುದು ಸರ್ಕಾರದ ಇಚ್ಛೆಯಲ್ಲ. ನಾವೇ ಇದನ್ನೆಲ್ಲ ವಿಚಾರಮಾಡಿ ಕೆಲವರು ಅಧಿಕಾರಿಗಳಿಗೆ ಸ್ಥಾನಗಳನ್ನು ಕಾನೂನಿಗನುಗುಣವಾಗಿ ಯಾವರೀತಿ ಕಾದಿರಿಸಲಾಗುತ್ತೊ ಅದನ್ನು ಕೊಡುವುದಕ್ಕೆ ಸರಕಾರ ಯಾವತ್ತೂ ಕಾತುರವಾಗಿದೆ ಎನ್ನುವುದನ್ನು ಪುನ:ಪುನ: ಇಲ್ಲಿ ಸ್ಪಷ್ಟಪಡಿಸುತ್ತಿದ್ದೇನೆ. ಮತ್ತೆ ಇಲ್ಲಿ ಪ್ರಮೋಷನ್ ವೇಕೆನ್ಸಿ ವಿಷಯವಾಗಿ ಇಲ್ಲಿ ಹೇಳಿದರು. ಅವರು ಇಲ್ಲಿ ಹೇಳುತ್ತಾ, ಸುಪ್ರೀಂಕೋರ್ಟು ರಂಗಚಾರಿ ಕೇಸ್ ನಲ್ಲಿ ಏನು ಹೇಳಿಷ್ಟಾರೆ ಎನ್ನುವುದನ್ನು ಅರ್ಥಮಾಡಿಕೊಂಡಿಲ್ಲ. ಇದನ್ನು ಮಾತನಾಡುವಾಗ ಸುಪ್ರೀಂ ಕೋರ್ಟು ಪ್ರಮೋಷನ್ ಕೊಡುವಾಗ ಪ್ರಮೋಷನ ತತ್ವವನ್ನು ಅನುಸರಿಸಿ ಮಾಡಬೇಕೆಂದು ಅವರುಹೇಳಿದಂತೆ ನನಗೆ ಅರಿವಾಯಿತು. ಸುಪ್ರೀಂ ಕೋರ್ಟು ರಂಗಾಚಾರಿ ಕೇಸಿನಲ್ಲಿ ಕೊಟ್ಟಿರತಕ್ಕದ್ದು ಸೆಲೆಕ್ಷನ ವೇಕೆನ್ಸಿಗಳನ್ನು ಫಿಲಅಪ್ ಮಾಡಿ ಎಂದು ಹೇಳಿಲ್ಲ ಇದನ್ನು ಪರಿಶೀಲಿಸಿ ನೀಕಾದರೆ ಕ್ಲೆಯರ್ ಆಗಿ ಹೇಳಿದ್ದಾರೆ, ಸಾಮಾನ್ಯವಾಗಿ ಪ್ರಮೋಷನ್ ಬಗ್ಗೆ ಏನು ನಡೆಯುತ್ತದೆ ಅದರಲ್ಲಿ ಗವರ್ನಮೆಂಟ್ಆಫ್ಇಂಡಿಯಾದ ಕೆಲವು ಪ್ರಸಂಗಗಳನ್ನ ಉತ್ತರವಾಗಿ ಒಂದು ಕಡೆ ಹೇಳಿದ್ದಾರೆ ಪ್ರಮೋಷನ್ ವೇಕೆನ್ಸಿಗಳನ್ನು ನಿಗದಿ ಮಾಡುವಾಗ ಯಾವ ವಿಧವಾದ ಏರುಪೇರುಗಳಿಗೂ ಅವಕಾಶಕೊಡದೆ ಕ್ರಮಬದ್ಧವಾಗಿ ಎಲ್ಲರಿಗೂ ಸಮಾನವಾದ ಅವಕಾಶಕೊಡಬೇಕು ಎಂದು ಇದರಲ್ಲಿ ಸ್ಪಷ್ಟವಾಗಿದೆ ಇದರಲ್ಲಿ ಹೆಚ್ಚಾಗಿ ಇನ್ನೇನು ಇಲ್ಲ ಎಲ್ಲರಿಗೂ ಸಮಾನವಾದ ಅವಕಾಶ ಕೊಡಬೇಕು ಎನ್ನುವುದು ನಿರ್ದಿಷ್ಟವಾಗಿ ಇರಬೇಕು ಏನ್ನುವುದು ಸುಪ್ರೀಂ ಕೋರ್ಟಿನ ತೀರ್ಮಾನದಲ್ಲಿ ಸ್ಪಷ್ಟವಾಗಿದ ಪ್ರಮೋಷನಲ್ ವೇಕೆನ್ಸಿಗಳನ್ನು ಸೀನಿಯಾರಿಟಿ ಕಂ ಫಿಟ್‌ನೆಸ್ ಎಂದುಮಾಡುವಾಗ ಹರಿಜನ ಗಿರಿಜನರಿಗೆ ಹಾಗೂ ಬ್ಯಾಕ್ ವರ್ಡ್ ಕ್ಲಾಸ್ಸಿಗಳಿಗೆ ಎಲ್ಲರಿಗೂ ಇರುವಂತೆ ಸರಿಸಮಾನವಾದ ಹಕ್ಕು ಇವರಿಗೂ ಇರುತ್ತದೆ. ಲೋಕಲ್ ಕ್ಯಾಂಡಿಡೇಟುಗಳ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡಿದರು ಇದರಲ್ಲೂ ಕೂಡ ಪ್ರಮೋಷನಲ್ ವೇಕೆನ್ಸಿಗಳನ್ನು ಫಿಲಪ್‌ಮಾಡುವಾಗ ಸರಿಸಮಾನವಾದ ಅವಕಾಶಗಳನ್ನು ಕೊಡುವುದು ನ್ಯಾಯವಾಗಿದೆ ಎಂದು ಅವರು ಹೇಳುವ ವಾದ ಸರಿಯಲ್ಲ. ತಮಗೆ ಇದರ ಬಗ್ಗೆ ವಿಚಾರ ಮಾಡಿದರೆ ಇದು ಚೆನ್ನಾಗಿ ಭಾಸವಾಗುತ್ತದೆ ಎಂದು ನನಗೆ ನಂಬಿಕೆ, ಸುಮಾರು ನಿಜ ವರ್ಷಗಳಿಂದಲೂ ಲೋಕಲ್ ಕ್ಯಾಂಡಿಡೇಟುಗಳ ಪ್ರಶ್ನೆ ಬರುತ್ತಲೇ ಇದೆ. ಇದರ ಬಗ್ಗೆ ವೇಕನ್ಸಿಗಳು ಬಂದಾಗ ಇಂತಹಸ್ಥಳೀಯ ಅಭ್ಯರ್ಥಿಗಳನ್ನು ರೆಕ್ರೂಟ್ ಮಾಡಬೇಕೆಂದು ಪಬ್ಲಿಕ್ ಸರ್ವಿಸ್ ಕಮೀಷನವರಿಗೆ ಸೂಚನೆಗಳನ್ನು ಕೊಡಲಾಗಿದೆ. ಇದರಲ್ಲಿ ಹರಿಜನರೂ ಅಥವಾ ಗಿರಿಜನರೂ ಇದ್ದಪಕ್ಷದಲ್ಲಿ ಅವರಿಗೂ ಪ್ರಾಧಾನ್ಯತೆ ಕೊಡಬೇಕೆಂದು ಹೇಳುವುದರಲ್ಲಿ ಮಾನ್ಯ ಸದಸ್ಯರಿಗೂ ಸರಕಾರಕ್ಕೂ ಯಾವ ಭಿನ್ನಾಭಿಪ್ರಾಯವು ಇಲ್ಲ. ಇವರಿಗೆಲ್ಲ ಆದಷ್ಟು ಹೆಚ್ಚು ಪ್ರಾಧಾನ್ಯತೆ ಕೊಡಲಿಕ್ಕೆ ಇನ್ನಾವುದೇ ಸರಕಾರದ ಆಶ್ವಾಸನೆಯು ಆಗಿದೆ ನಮ್ಮ ಮಾನ್ಯ ಸದಸ್ಯರಾದ ಶ್ರೀ ಮಾನ್ಯ ಪುಟ್ಟಸ್ವಾಮಿಯವರು ಶಂಕೆ ವ್ಯಕ್ತಮಾಡಿರುವುದು ವಿಲೇಜು ಅಕೌಂಟೆಂಟರುಗಳನ್ನು ನೇಮಕಮಾಡುವಾಗ ಮೂರು ಸಾವಿರದಿಂದ ನಾಲ್ಕು ಸಾವಿರದವರೆಗೆ ಅರ್ಜಿಗಳನ್ನು ಕರೆದಿದ್ದರು, ಅದರಲ್ಲಿ ಶೇಖಡ ೧೦ರಷ್ಟು ಸ್ಥಾನಗಳನ್ನು ಹಿಂದುಳಿದ ವರ್ಗಗಳವರಿಗೆ ಕೊಡಲಿಲ್ಲ ಇದು ಅವರು ಮಾಡಿರುವ ದೊಡ್ಡ ಅಪರಾಧ ಎಂದು ಹೇಳಿದರು ಮಾನ್ಯ ಸದಸ್ಯರಿಗೆ ಹೆಡ್ಕ್ವಾಲು ಕ್ವಾಸ್ಟು ಮತ್ತು ಹೆಡ್ಕ್ವಾಲು ಟ್ರೈಬ್ಸ್‌ಗಳ ಬಗ್ಗೆ ಎಷ್ಟುವಿಶ್ವಾಸ ಅಭಿಮಾನ ಮತ್ತು ಶ್ರದ್ಧೆ ಆಸಕ್ತಿ ಇದೆಯೋ ಅದಕ್ಕಿಂತ ಹೆಚ್ಚು ಆಸಕ್ತಿ ಸರಕಾರಕ್ಕೆ ಇದೆ ಎಂಬುದನ್ನು ಮತ್ತೊಮ್ಮೆ ಸ್ಪಷ್ಟಪಡಿಸುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿ :– ಅನೇಕ ಇಲಾಖೆಗಳಲ್ಲಿ ಹತ್ತು ಇಪ್ಪತ್ತುವೇಕನ್ಸಿಗಳು ಬಂತ್ತವೆ ಆದರೆ ಆ ರುವ ಅಧಿಕಾರಿಗಳು ಅಲ್ಲಿ ಒಂದು ಏರಡು ವೇಕನ್ಸಿಗಳಿಗೆ ಮಾತ್ರ ಅಡ್ವರ್ಟೈಸ್‌ಮೆಂಟ್ ಕೊಳುಹಿಸಿ ಬಾಕಿ ವೇಕೆನ್ಸಿಗಳ ಬಗ್ಗೆ ಹೇಳುವುದೇ ಇಲ್ಲ. ಇದರಿಂದಾಗಿ ಹರಿಜನರಿಗೆ ನ್ಯಾಯವಾಗಿ ಸಿಗುವ ಕೆಲಸಗಳು ಸಿಗುವುದೇ ಇಲ್ಲ ಆದುದರಿಂದ ನಾನು ಸರಕಾರಕ್ಕೆ ಸೂಚನೇಕೊಟ್ಟು ಅಧಿಕಾರಿಗಳಿಗೆ ಇಟ್ಟು ನಿಷ್ಟಾದ ಕ್ರಮವನ್ನು ಅನುಸರಿಸಬೇಕೆಂದು ಅವರಲ್ಲಿ ಮನವಿಮಾಡಿ ಕೊಳ್ಳುತ್ತೇನೆ. ಅನೇಕ ಇಲಾಖೆಗಳಲ್ಲಿ

ಹರಿಜನ ಹಾಗೂ ಗಿರಿಜನರಿಗೆ ಸರಿಯಾಗಿ ಸಾಕಷ್ಟು ಪ್ರಾಧಿನಿತ್ಯ ಕೊಟ್ಟಿಲ್ಲ, ಹೀಗೆ ಇರುವ ಕಾನೂನನ್ನು ಪಾಲನೆ ಮಾಡದೇ ಇದ್ದರೆ ನಾವು ಇದನ್ನು ಸರಕಾರದ ಗಮನಕ್ಕೆ ತರುವುದು ನಮ್ಮ ಕರ್ತವ್ಯ ಎಂದು ಇಲ್ಲಿ ಸರಕಾರ ದವರಿಗೆ ಅರಿಕೆ ಮಾಡುತ್ತೇನೆ.

ಶ್ರೀ ಹೆಚ್ ಎಂ. ಚನ್ನಬಸಪ್ಪ :– ಮಾನ್ಯ ಸದಸ್ಯರು ಕಾನೂನು ಪಾಲನೆ ಮಾಡಲಿಲ್ಲ ಎನ್ನುವ ವಿಚಾರ ಹೇಳುತ್ತಿದ್ದಾರೆ. ಅದನ್ನು ಯಾವ ಆಧಾರದಮೇಲೆ ಹೇಳಿದಾರೆ ಎನ್ನುವುದನ್ನು ಸರಕಾರ ಪರಿಶೀಲನೆ ಮಾಡಬೇಕಾಗುತ್ತದೆ.

ಉಪಾಧ್ಯಕ್ಷರು :—ಸಭೆ ಇಂದು ಎದ್ದು ಮತ್ತೆ ನಾಳೆ ೧೨ ಗಂಟೆಗೆ ಸಮಾವೇತಗೊಳ್ಳುತ್ತದೆ.

---

*The House adjourned at fifty five Minutes past five of the Clock to meet again at Twelve of the clock on Wednesday the 20th December 1972.*

---

WD 18890—GPB—550—10-2-1974.